ಬೆಂಗಳೂರು ಮಹಾನಗರದ ಆಜೆಂಡಾ ಕಾರ್ಯಪಡೆಯ ಕಾರ್ಯವೈಖರಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 966(266)

ಸದಸ್ಯರ ಹೆಸರು: ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ)

ಪ್ರಶ್ನೆ

ಅ) ಬೆಂಗಳೂರು ಮಹಾನಗರ ಆಜೆಂಡಾ ಕಾರ್ಯಪಡೆ ಎಂದು ಅಸ್ತಿತ್ವಕ್ಕೆ ಬಂತು?

ಆ) ಈ ಕಾರ್ಯಪಡೆಯ ಸದಸ್ಯರುಗಳ ಹೆಸರು, ವಿಳಾಸ ನೀಡುವುದು?

ಇ) ಈ ಕಾರ್ಯಪಡೆಗೆ ಬೆಂಗಳೂರು ನಗರದ ಶಾಸಕರನ್ನು ಆಹ್ವಾನಿಸಲಾಗಿತ್ತಿರಯೇ?

ಈ) ಈ ಕಾರ್ಯಪಡೆಯು ಇಲ್ಲಿಯವರೆಗೆ ಮಾಡಿರುವ ಶಿಫಾರಸ್ಸುಗಳೆಷ್ಟು ಹಾಗೂ ಅವುಗಳಲ್ಲಿ ಎಷ್ಟು ಶಿಫಾರಸ್ಸುಗಳು ಕಾರ್ಯಗತವಾಗಿದೆ?

ಉ) ಈ ಕಾರ್ಯಪಡೆಗಾಗಿ ಇಲ್ಲಿಯವರೆಗೆ ಖರ್ಚಾಗಿರುವ ಹಣವೆಷ್ಟು?

ಉತ್ತರಿಸುವ ಸಚಿವರು: ಶ್ರೀಟಿ.ಜಾನ್(ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು)

ಉತ್ತರ

ಅ) ಸರ್ಕಾರದ ಆದೇಶ ಸಂ.ನಅಇ 400 ಎಂಎನ್‌ಪ್ಯ 99, ದಿನಾಂಕ 26-11-99ರಂದು ಬೆಂಗಳೂರು ಆಜೆಂಡಾ ಕಾರ್ಯಾಚರಣೆ ಪಡೆ ಅಸ್ತಿತ್ವಕ್ಕೆ ಬಂತು.

ಆ) 1. ನಂದನ್.ಎಂ.ನಿಲೇಕನಿ
ಎಂ.ಡಿ., ಇನ್‌ಫೋಸಿಸ್ ಟೆಕ್ನಾಲಾಜೀಸ್
ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು

2. ನರೇಶ್ ಮಲೋತ್ರ, ಪಾರ್ಟ್‌ನರ್
ಕೆಪಿಎಂಜಿ 20:2, ಮಿಥಲ್ ಮಲ್ಯ ರಸ್ತೆ
ಬೆಂಗಳೂರು.

3. ಡಾ:ರಾಜಾರಾಮಣ್ಣ ಎಂ.ಪಿ. 407,
9ನೇ ಕ್ರಾಸ್, 2ನೇ ಬ್ಲಾಕ್, ಆರ್‌ಟಿ ನಗರ
ಬೆಂಗಳೂರು.

4. ಡಾ: ಸಾಮ್ಯುಯಲ್ ಪಾಲ್, 578,
16ನೇ ಬಿ ಮೇನ್, 3ನೇ ಕ್ರಾಸ್,
3ನೇ ಬ್ಲಾಕ್, ಕೋರಮಂಗಲ

5. ಎಂ.ಕೆ.ರಾಮಚಂದ್ರ,
14, ಕನ್ನಿಂಗ್ ಹ್ಯಾಂ ರಸ್ತೆ,
ಬೆಂಗಳೂರು.

6. ಬಿ.ಕೆ.ದಾಸ್, ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

7. ನರೇಶ್ ವೆಂಕಟರಾಮನ್, 10:2,
ಲಾಂಗ್‌ಫೋರ್ಡ್ ಟೌನ್, ಬೆಂಗಳೂರು.

8. ಡಾ: ಹೆಚ್.ನರಸಿಂಹಯ್ಯ,
ಬಸವನಗುಡಿ,
ಬೆಂಗಳೂರು.

9. ಪಿ.ರವಿಚಂದರ್, 1:03, 1ನೇ ಮಹಡಿ,
1ಬಿ, ಹಲಸೂರು ರಸ್ತೆ, ಬೆಂಗಳೂರು-8

10. ಅಶೋಕ್ ಪಳವಾಯಿ, ಆಯುಕ್ತರು,
ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

11. ಟಿ.ಜಕಾರಿಯ, 33-34,
ಬೆಲ್ಸ್ ಸ್ಟ್ರೀಟ್,
ಬೆಂಗಳೂರು.

12. ನಿರಂಜನ್ ಆಳ್ವ, 11, ಮಿಲ್ಟನ್ ರಸ್ತೆ,
ಕುಕ್ ಟೌನ್, ಬೆಂಗಳೂರು.

13. ರಮೇಶ್ ರಾಮನಾಥನ್, 565,
3ನೇ ಬ್ಲಾಕ್, ಆರ್.ಎಂ.ವಿ 2ನೇ ಹಂತ,
ಬೆಂಗಳೂರು

14. ಕಲ್ಪನಾಕರ್, 437, 12ನೇ ಮೇನ್,
3ನೇ ಬ್ಲಾಕ್, ಕೋರಮಂಗಲ,
ಬೆಂಗಳೂರು.

15. ಸುರೇಶ್ ಹೆಬಳ್ಳೀಕರ್ 506:3
ನ್ಯೂ ಡಯಾಗನ್ ರಸ್ತೆ 18ನೇ
ಅಡ್ಡರಸ್ತೆ 3ನೇ ಬ್ಲಾಕ್, ಜಯನಗರ,
ದೂರವಾಣಿ: 6553422.

ಇ) ಹೌದು.

ಈ) ಬೆಂಗಳೂರು ಮಹಾನಗರ ಪಾಲಿಕೆಯು ಅಜೆಂದಾ ಕಾರ್ಯಚರಣೆ ಪಡೆಯ ಸಹಭಾಗಿತ್ವದೊಂದಿಗೆ ಕಾರ್ಯನಿರ್ವಹಿಸುತ್ತಾ ಬಂದಿದ್ದು, ಈ ಕೆಳಕಂಡ ಯೋಜನೆಗಳನ್ನು ಜಾರಿಗೆ ತಂದಿದೆ.

1. ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿ.

2. ಸ್ವಚ್ಛ ಬೆಂಗಳೂರು.

3. ನಿರ್ಮಲ ಬೆಂಗಳೂರು.

4. ಘನ ತ್ಯಾಜ್ಯ ವಸ್ತುಗಳ ನಿರ್ವಹಣೆ.

5. ಶುಚಿ ಮಿತ್ರ

6. ಬಸ್ ತಂಗುದಾಣಗಳನ್ನು ಆಧುನೀಕರಿಸುವುದು.

7. ಲೆಕ್ಕಪತ್ರ ನಿರ್ವಹಣೆಯ ಆಧುನೀಕರಣ.

8. ಸಂಚಾರ ಸೂಚನಾ ಫಲಕ ಹಾಗೂ ರಸ್ತೆ ಬದಿಯ ಸಲಕರಣೆಗಳು.

9. ಕಿಂಕೋ ಜಂಕ್ಷನ್ : ಹೊಸೂರು ರಸ್ತೆ

10. ಆಯ್ದ ಸ್ಥಳಗಳಲ್ಲಿ ಏಕಮುಖ ಸಂಚಾರ.

11. ಶಿವಾಜಿನಗರ ಬಸ್ ನಿಲ್ದಾಣದಲ್ಲಿ ಆಧುನಿಕ ಸೈನೇಜ್ ಪದ್ಧತಿ.

ಉ) ಕಾರ್ಯಾಚರಣೆ ಪಡೆಯ ಕಾರ್ಯ ನಿರ್ವಹಣೆಯಲ್ಲಿ ನಗರ ಪಾಲಿಕೆಯ ಪತಿಯಿಂದ

ಯಾವುದೇ ಖರ್ಚು ವೆಚ್ಚಗಳಾಗಿರುವುದಿಲ್ಲ

ಸರ್ಕೀಟ್ ಬೆಂಚ್ ಕಾರ್ಯಾರಂಭ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 967(262)

ಸನಸ್ಯರ ಹೆಸರು: ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ)

ಪ್ರಶ್ನೆ

ಅ) ನವೆಂಬರ್ 1, 2001 ರಿಂದ ರಾಜ್ಯದಲ್ಲಿ ಸರ್ಕೀಟ್ ಬೆಂಚ್ ಕಾರ್ಯಾರಂಭ ಮಾಡುವುದಾಗಿ ಸರ್ಕಾರ ಘೋಷಿಸಿದ್ದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಈ ಸರ್ಕೀಟ್ ಬೆಂಚ್ ಕಾರ್ಯಾರಂಭಗೊಂಡಿದೆಯೇ?

ಇ) ಇಲ್ಲದಿದ್ದಲ್ಲಿ ಕಾರಣಗಳೇನು?

ಈ) ಇದಕ್ಕಾಗಿ ಮೂಲಭೂತ ಸೌಲಭ್ಯ ಮತ್ತು ಪಣಕಾಸು ವ್ಯವಸ್ಥೆ ಒದಗಿಸಲಾಗಿದೆಯೇ?

ಉ) ಈ ಸರ್ಕೀಟ್ ಬೆಂಚ್ ಅನ್ನು ಯಾವಾಗ ಪ್ರಾರಂಭಿಸಲಾಗುವುದು?

ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು)

ಉತ್ತರ

ಅ) ಹೌದು.

ದಿನಾಂಕ:1-11-2001 ದಿಂದ ಸ್ಥಾಪಿಸಲು ಉದ್ದೇಶಿಸಲಾಗಿತ್ತು.

ಆ) ಇಲ್ಲ

ಇ) ಮಾನ್ಯ ಮುಖ್ಯ ನ್ಯಾಯಾಧೀಶರಿಂದ ಪ್ರಸ್ತಾಪ ಈವರೆಗೂ ಬಂದಿರುವುದಿಲ್ಲ

ಈ) ಮಾನ್ಯ ಮುಖ್ಯ ನ್ಯಾಯಾಧೀಶರಿಂದ ಪ್ರಸ್ತಾಪ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು.

ಉ) ಅಂಶ (ಈ) ಉತ್ತರದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ